**ದಿನಾಂಕ 25.09.2025** **ಓ ಎಸ್ ನಂ. 128/2017**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಡಿಡಬ್ಲ್ಯೂ 1**

**ಮುಂದುವರೆದ ಪಾಟೀ ಸವಾಲುಃ** ವಾದಿ ಪರ ವಕೀಲರಿಂದಃ.

ಪ್ರತಿವಾದ ಪತ್ರದಲ್ಲಿ ನನ್ನ ಸಹಿ ಇದೆ ಎಂದರೆ ಸರಿ. ನಿಪಿ 1 ದಾಖಲೆಯ ಪ್ರಕಾರ ನನ್ನ ದೊಡ್ಡಪ್ಪನ ಮಗನಾದ ಶಿವಜ್ಜ ಹನುಮಂತಪ್ಪರವರು ಹೆಗ್ಗಪ್ ಸಣ್ಣ ನಿಂಗಪ್ಪ, ಮೈಲಾರಪ್ಪ ಮತ್ತು ಚೌಡಪ್ಪ ರವರಿಗೆ ಹಕ್ಕು ಖುಲಾತೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 2 ರ ಪ್ರಕಾರ ಮೈಲಾರಪ್ಪ ಮತ್ತು ಶಿವಜ್ಜ ಹನುಮಂತಪ್ಪ ರವರು ದಿನಾಂಕ 14.12.1966 ರಂದು ದ್ಯಾಮಪ್ಪ ಮತ್ತು ಶಿವಪ್ಪ ನವರಿಗೆ ಮೈಲಾರಪ್ಪ ರವರ ಹಿಸ್ಸೆಗೆ ಬಂದ ಆಸ್ತಿಯಲ್ಲಿ ಸರ್ವೆ ನಂ. 65/1 ಎ ರ ಜಮೀನಿನ 4.36 ಎಕರೆ ಜಮೀನಿನಲ್ಲಿ 2.33 ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಉಳಿದ 1.36 ಎಕರೆ ಜಮೀನು ವಾದಿಯ ತಂದೆಯಾದ ದುಗ್ಗಪ್ಪ ರವರ ಹೆಸರಿಗೆ ಉಳಿದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 65 ರಲ್ಲಿ ನಮಗೆ ಹಿಸ್ಸೆಗೆ 7.00 ಎಕರೆ ಜಮೀನು ಬಂದಿರುತ್ತದೆ. ನಿಪಿ 5 ರಲ್ಲಿ 26 ಗಂಟೆ ಜಮೀನು ನನ್ನ ತಂದೆಗೆ ಸೇರಿದ್ದಲ್ಲ, ವಾದಿಯರಿಗೆ ಸೇರಿದ್ದು ಎಂದರೆ ಸರಿಯಲ್ಲ. ನನ್ನ ಅಜ್ಜಿ ಮೃತರಾದ ನಂತರ ಸದರಿ ನಿಪಿ 5 ರಲ್ಲಿ ಆಸ್ತಿಯನ್ನು ನಿಪಿ 9 ರಂತೆ ನನ್ನ ತಂದೆಯ ಹೆಸರಿಗೆ ಖಾತೆ ಬದಲಾವಣೆ ಆಗಿದ್ದು, ನಿಪಿ 9 ನ್ನು ಸುಳ್ಳು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಮತ್ತು 4 ನೇ ಪ್ರತಿವಾದಿ ಸೇರಿಕೊಂಡು ವಾದಿಗೆ ಸಂಬಂಧ ಪಟ್ಟ ಅಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ